# ಉತ್ತಮ ಆಡಳಿತದ ದಿಕ್ಕಿನಲ್ಲಿ ಮಾಹಿತಿ ಹಕ್ಕು ಕಾಯ್ದೆ–2005 & 2019: ಸಿವಿಲ್ ಸೊಸೈಟಿಯ ಸಕ್ರಿಯತೆ ಮತ್ತು ಪರಿಣಾಮಗಳು

**ಸಿದ್ದಯ್ಯ ಎಸ್.ವಿ.[1] & ಅಶೋಕ್ ಕುಮಾರ್ ವಿ. ಪಾಳೇದ[2]**

[1]ಸಂಶೋಧನಾ ವಿದ್ಯಾರ್ಥಿ, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.

[2]ಸಂಶೋಧನಾ ಮಾರ್ಗದರ್ಶಕರು, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.

**DOI: https://doi.org/10.5281/zenodo.18849584**

## ABSTRACT:

ಮಾಹಿತಿ ಹಕ್ಕು ಕಾಯ್ದೆ, 2005 (Right to Information Act, 2005) ಭಾರತದಲ್ಲಿ ಪಾರದರ್ಶಕತೆ, ಹೊಣೆಗಾರಿಕೆ ಮತ್ತು ಉತ್ತಮ ಆಡಳಿತವನ್ನು ಬಲಪಡಿಸುವ ಪ್ರಮುಖ ಕಾನೂನು ಸಾಧನವಾಗಿದೆ. ಮಾಹಿತಿ ಹಕ್ಕು ಸಂವಿಧಾನದ ಕಲಂ 19(1)(a) ಅಡಿಯಲ್ಲಿ ವ್ಯಕ್ತಿಯ ಅಭಿವ್ಯಕ್ತಿ ಸ್ವಾತಂತ್ರ್ಯದ ಅವಿಭಾಜ್ಯ ಅಂಗವೆಂದು Supreme Court of India ತೀರ್ಪುಗಳ ಮೂಲಕ ಸ್ಪಷ್ಟಪಡಿಸಿದೆ. ಈ ಅಧ್ಯಯನವು ಉತ್ತಮ ಆಡಳಿತದ ಸಾಧನೆಯಲ್ಲಿ ಮಾಹಿತಿ ಹಕ್ಕು ಕಾಯ್ದೆಯ ಪಾತ್ರವನ್ನು ವಿಶ್ಲೇಷಿಸಿ, ಅದರ ಪರಿಣಾಮಕಾರಿತ್ವದಲ್ಲಿ ಸಿವಿಲ್ ಸೊಸೈಟಿಯ ಸಕ್ರಿಯತೆಯನ್ನು ಪರಿಶೀಲಿಸುತ್ತದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಾಗರಿಕರ ಪಾಲ್ಗೊಳ್ಳುವಿಕೆ ಮತ್ತು ಸರ್ಕಾರದ ಕಾರ್ಯಚಟುವಟಿಕೆಗಳ ಮೇಲಿನ ಸಾರ್ವಜನಿಕ ನಿಯಂತ್ರಣವು ಉತ್ತಮ ಆಡಳಿತದ ಮೂಲ ಅಂಶಗಳಾಗಿವೆ. ಈ ಹಿನ್ನೆಲೆಯಲ್ಲಿ, ಸಿವಿಲ್ ಸೊಸೈಟಿ ಸಂಘಟನೆಗಳು ಮಾಹಿತಿ ಹಕ್ಕಿನ ಜಾಗೃತಿ ಮೂಡಿಸುವುದು, ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಸಲ್ಲಿಸುವುದು ಹಾಗೂ ಭ್ರಷ್ಟಾಚಾರದ ವಿರುದ್ಧ ಹೋರಾಟ ನಡೆಸುವ ಮೂಲಕ ಆಡಳಿತ ವ್ಯವಸ್ಥೆಯಲ್ಲಿ ಪಾರದರ್ಶಕತೆಯನ್ನು ಹೆಚ್ಚಿಸಿವೆ.

ಈ ಸಂಶೋಧನಾ ಅಧ್ಯಯನವು ಗುಣಾತ್ಮಕ ವಿಧಾನವನ್ನು ಅನುಸರಿಸಿ ದ್ವಿತೀಯಕ ಮೂಲಗಳ ಆಧಾರದ ಮೇಲೆ ವಿಶ್ಲೇಷಣೆಯನ್ನು ನಡೆಸುತ್ತದೆ. ಮಾಹಿತಿ ಹಕ್ಕು ಕಾಯ್ದೆ ಆಡಳಿತದ ಹೊಣೆಗಾರಿಕೆಯನ್ನು ಬಲಪಡಿಸಿದರೂ, ಅದರ ಪರಿಣಾಮಕಾರಿತ್ವವು ಸಿವಿಲ್ ಸೊಸೈಟಿಯ ಚಟುವಟಿಕೆಗಳು, ಸಾರ್ವಜನಿಕ ಜಾಗೃತಿ ಹಾಗೂ ಮಾಹಿತಿ ಆಯೋಗಗಳ ಕಾರ್ಯಕ್ಷಮತೆಯ ಮೇಲೆ ಅವಲಂಬಿತವಾಗಿದೆ. ಜೊತೆಗೆ, ವಿಳಂಬ, ಅಪೂರ್ಣ ಮಾಹಿತಿ, ಹಾಗೂ ಕಾನೂನು ಜಾರಿಗೆ ಸಂಬಂಧಿಸಿದ ಸವಾಲುಗಳು ಇನ್ನೂ ಮುಂದುವರಿದಿವೆ.

## KEYWORDS:

ಮಾಹಿತಿ ಹಕ್ಕು ಕಾಯ್ದೆ, ಉತ್ತಮ ಆಡಳಿತ, ಸಿವಿಲ್ ಸೊಸೈಟಿ, ಪಾರದರ್ಶಕತೆ ಮತ್ತು ಉತ್ತರದಾಯಕತೆ, ಜನಸಹಭಾಗಿತ್ವ.

## 1. ಪರಿಚಯ:

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆ ಉತ್ತಮ ಆಡಳಿತದ ಮೂಲ ಅಂಶಗಳಾಗಿವೆ. ಭಾರತದಲ್ಲಿ Right to Information Act, 2005 ಜಾರಿಯಾದ ನಂತರ ಸರ್ಕಾರದ ಕಾರ್ಯಚಟುವಟಿಕೆಗಳಲ್ಲಿ ನಾಗರಿಕರ ನೇರ ಪಾಲ್ಗೊಳ್ಳುವಿಕೆ ಹೆಚ್ಚಾಗಿದೆ. ಮಾಹಿತಿ ಹಕ್ಕು ಕಾಯ್ದೆ ಆಡಳಿತವನ್ನು ಸಾರ್ವಜನಿಕ ಪರಿಶೀಲನೆಗೆ ಒಳಪಡಿಸುವ ಮಹತ್ವದ ಕಾನೂನು ಸಾಧನವಾಗಿದೆ.

ಭಾರತದಲ್ಲಿ ಪಾರದರ್ಶಕ ಆಡಳಿತ (Good Governance) ಒಂದು ಮಹತ್ತರ ಗುರಿಯಾಗಿದ್ದು, ಸಾರ್ವಜನಿಕ ಅಧಿಕಾರಿಗಳು ತಮ್ಮ ಕಾರ್ಯಗಳಿಗಾಗಿ ನಾಗರಿಕರ ಮುಂದೆ ಜವಾಬ್ದಾರಿಯಾಗಿರಬೇಕು ಎಂದು ಒಪ್ಪಿಕೊಳ್ಳಲಾಗಿದೆ. RTI Act–2005 ಇದನ್ನು ನ್ಯಾಯಸಮ್ಮತವಾಗಿ ಬಲಪಡಿಸಿದೆ. ಹಾಗೂ ಈ ಕಾಯ್ದೆಯು ಪ್ರಜಾಪ್ರಭುತ್ವದ ಮಟ್ಟಿಗೆ ರಹಸ್ಯತೆಯನ್ನು ತೆರವುಗೊಳಿಸುವ ಮಾರ್ಗವನ್ನು ಕಂಡುಕೊಂಡು, ಸಾಮಾನ್ಯ ನಾಗರಿಕರಿಗೆ ಮತ್ತು ಸಿವಿಲ್ ಸೊಸೈಟಿ ಸಂಘಟನೆಗಳಿಗೆ ಮಾಹಿತಿ ಕೋರುವ ಹಕ್ಕನ್ನು ನೀಡಿತು, ಇದರಿಂದಾಗಿ ಆಡಳಿತಾತ್ಮಕ ಪರಿವರ್ತನೆಗಳಿಗೆ ದಾರಿ ನಿರ್ಮಾಣವಾಯಿತು.

ಈ ಕಾಯ್ದೆಯ ಪರಿಣಾಮಕಾರಿತ್ವದಲ್ಲಿ ಸಿವಿಲ್ ಸೊಸೈಟಿಯ ಪಾತ್ರ ನಿರ್ಣಾಯಕವಾಗಿದೆ. ಸಾಮಾಜಿಕ ಚಳವಳಿಗಳು, ಸ್ವಯಂಸೇವಾ ಸಂಸ್ಥೆಗಳು ಮತ್ತು ನಾಗರಿಕ ಗುಂಪುಗಳು ಮಾಹಿತಿ ಹಕ್ಕಿನ ಜಾಗೃತಿ ಮೂಡಿಸಿ, ಭ್ರಷ್ಟಾಚಾರವನ್ನು ಬಹಿರಂಗಪಡಿಸಿ, ಸಾರ್ವಜನಿಕ ಹಿತಾಸಕ್ತಿ ಪ್ರಶ್ನೆಗಳನ್ನು ಮುಂದಿಟ್ಟಿವೆ. ಈ ಅಧ್ಯಯನವು ಮಾಹಿತಿ ಹಕ್ಕು ಕಾಯ್ದೆಯ ಮೂಲಕ ಉತ್ತಮ ಆಡಳಿತ ಸಾಧನೆಯಲ್ಲಿ ಸಿವಿಲ್ ಸೊಸೈಟಿಯ ಸಕ್ರಿಯತೆಯನ್ನು ವಿಶ್ಲೇಷಿಸುತ್ತದೆ.

- ಉತ್ತಮ ಆಡಳಿತ (Good Governance) ಎಂಬ ಪರಿಕಲ್ಪನೆ 1990ರ ದಶಕದಲ್ಲಿ ಜಾಗತಿಕವಾಗಿ ಪ್ರಸಿದ್ಧಿ ಪಡೆದಿತು. World Bank ಉತ್ತಮ ಆಡಳಿತವನ್ನು "ಪಾರದರ್ಶಕ, ಜವಾಬ್ದಾರಿಯುತ ಮತ್ತು ಪರಿಣಾಮಕಾರಿ ಆಡಳಿತ" ಎಂದು ವ್ಯಾಖ್ಯಾನಿಸಿದೆ.
- ಭಾರತದಲ್ಲಿ ಮಾಹಿತಿ ಹಕ್ಕಿನ ಪರಿಕಲ್ಪನೆ ಸಂವಿಧಾನಾತ್ಮಕ ಮೌಲ್ಯಗಳೊಂದಿಗೆ ಸಂಬಂಧಿಸಿದೆ. Justice P.N. Bhagwati ಅವರ ಅಭಿಪ್ರಾಯದಂತೆ, "ಮಾಹಿತಿ ಹಕ್ಕು ಪ್ರಜಾಪ್ರಭುತ್ವದ ಆಧಾರಸ್ತಂಭವಾಗಿದೆ." 2005ರಲ್ಲಿ RTI Act ಜಾರಿಯಾದಾಗಿನಿಂದ, ನಾಗರಿಕರಿಗೆ ಸಾರ್ವಜನಿಕ ಪ್ರಾಧಿಕಾರಗಳಿಂದ ಮಾಹಿತಿ ಪಡೆಯುವ ಕಾನೂನುಬದ್ಧ ಹಕ್ಕು ಲಭಿಸಿತು.

**2. RTI Act – 2005 ರ ಮೂಲಾಶಯಗಳು ಮತ್ತು ತಾತ್ಪರ್ಯ:**

- ಸಾರ್ವಜನಿಕ ಅಧಿಕಾರಿಗಳೆಂದರೆ public authority–ಗಳಿಂದ ಯಾವುದೇ ನಾಗರಿಕರು ಮಾಹಿತಿ ಪಡೆಯುವ ಹಕ್ಕು.
- ಸಾರ್ವಜನಿಕ ಪ್ರಾಧಿಕಾರವು ಸಾಮಾನ್ಯವಾಗಿ ಅರ್ಜಿ ಸ್ವೀಕರಿಸಿದ ದಿನಾಂಕದಿಂದ 30 ದಿನಗಳೊಳಗೆ ಮಾಹಿತಿ ನೀಡಬೇಕಾಗುತ್ತದೆ. ಆದರೆ ಅರ್ಜಿ ಜೀವನ ಅಥವಾ ವೈಯಕ್ತಿಕ ಸ್ವಾತಂತ್ರ್ಯಕ್ಕೆ (Life or Liberty) ಸಂಬಂಧಿಸಿದ ವಿಷಯವಾಗಿದ್ದರೆ, ಆ ಮಾಹಿತಿಯನ್ನು 48 ಗಂಟೆಗಳ ಒಳಗಾಗಿ ಒದಗಿಸುವುದು ಕಡ್ಡಾಯವಾಗಿದೆ.
- ಈ ವಿಧಾನದ ಆಧಾರವು Right to Information Act ನ ಧಾರಾ 7(1) ಆಗಿದೆ.
- Section 4 (1) (b) ರಂತೆ ಬಹುಮುಖ್ಯ ಮಾಹಿತಿಯನ್ನು suo moto (ಸ್ವತಃ ಪ್ರಕಟಣೆ) ನೀಡುವ ಜವಾಬ್ದಾರಿ ಇದೆ.
- PIO (Public Information Officer) ಗಳ ವಿರುದ್ಧ ವಿಳಂಬ ಹಾಗೂ ತಪ್ಪು ನಿರಾಕರಣೆಗೆ ದಂಡಾತ್ಮಕ ಕ್ರಮಗಳನ್ನು ವಿಧಿಸಲಾಗಿದೆ.
- ಹೀಗಾಗಿ ಇದು Freedom of Speech and Expression ಅಡಿ ಸಂವಿಧಾನಾತ್ಮಕ ಮೌಲ್ಯಗಳನ್ನೂ ರಕ್ಷಿಸುತ್ತದೆ.

**3. ಮಾಹಿತಿ ಹಕ್ಕಿನ ಸಂವಿಧಾನಾತ್ಮಕ ಅಡಿಪಾಯ:**

- Supreme Court of India ತನ್ನ ತೀರ್ಪುಗಳಲ್ಲಿ ಮಾಹಿತಿ ಹಕ್ಕು ಅಭಿವ್ಯಕ್ತಿ ಸ್ವಾತಂತ್ರ್ಯದ ಅಂಗವೆಂದು ಹೇಳಿದೆ.
- State of UP v. Raj Narain (1975) – ಸರ್ಕಾರದ ಕಾರ್ಯಗಳ ಬಗ್ಗೆ ಜನರಿಗೆ ತಿಳಿಯುವ ಹಕ್ಕು ಇದೆ ಎಂದು ತೀರ್ಪು.
- S.P. Gupta v. Union of India (1982) – ಪಾರದರ್ಶಕತೆ ಪ್ರಜಾಪ್ರಭುತ್ವದ ಅವಿಭಾಜ್ಯ ಅಂಗ ಎಂದು ಸ್ಪಷ್ಟಪಡಿಸಿತು.
- Central Board of Secondary Education v. Aditya Bandopadhyay (2011)
- Subhash Chandra Agarwal Case (2019). ಇವು RTI ಯ ವ್ಯಾಪ್ತಿಯನ್ನು ವಿಸ್ತರಿಸಿವೆ.

**4. ಉದ್ದೇಶಗಳು: ಈ ಸಂಶೋಧನೆಯ ಪ್ರಮುಖ ಉದ್ದೇಶಗಳು:**

**1. ಮಾಹಿತಿ ಹಕ್ಕು ಕಾಯ್ದೆಯ ಮೂಲಕ ಉತ್ತಮ ಆಡಳಿತ ಸಾಧನೆಯ ಸಾಧ್ಯತೆಗಳನ್ನು ವಿಶ್ಲೇಷಿಸುವುದು:**

ಮಾಹಿತಿ ಹಕ್ಕು ಕಾಯ್ದೆ ನಾಗರಿಕರಿಗೆ ಸರ್ಕಾರದ ನಿರ್ಧಾರಗಳು, ಹಣಕಾಸು ವ್ಯವಹಾರಗಳು, ಸಾರ್ವಜನಿಕ ಯೋಜನೆಗಳ ಅನುಷ್ಠಾನ ಹಾಗೂ ಆಡಳಿತಾತ್ಮಕ ಕ್ರಮಗಳ ಕುರಿತು ಮಾಹಿತಿ ಪಡೆಯುವ ಕಾನೂನುಬದ್ಧ ಹಕ್ಕನ್ನು ನೀಡುತ್ತದೆ. ಉತ್ತಮ ಆಡಳಿತದ ಮೂಲಭೂತ ಅಂಶಗಳಾದ ಪಾರದರ್ಶಕತೆ (Transparency), ಉತ್ತರದಾಯಕತೆ (Accountability), ಪ್ರತಿಕ್ರಿಯಾಶೀಲತೆ (Responsiveness), ಕಾನೂನು ಪ್ರಾಬಲ್ಯ (Rule of Law) ಮತ್ತು ಜನಸಹಭಾಗಿತ್ವ (Participation) ಇವುಗಳನ್ನು ಬಲಪಡಿಸುವಲ್ಲಿ RTI ಪ್ರಮುಖ ಸಾಧನವಾಗಿದೆ.

1. ಪಾರದರ್ಶಕತೆ: ಸರ್ಕಾರದ ದಾಖಲೆಗಳು ಮತ್ತು ನಿರ್ಧಾರಗಳು ಸಾರ್ವಜನಿಕ ಪರಿಶೀಲನೆಗೆ ಲಭ್ಯವಾಗುವುದರಿಂದ ಆಡಳಿತ ಸ್ಪಷ್ಟತೆ ಹೊಂದುತ್ತದೆ.
2. ಉತ್ತರದಾಯಕತೆ: ಸಾರ್ವಜನಿಕ ಮಾಹಿತಿ ಅಧಿಕಾರಿಗಳು (PIOs) ನಿರ್ದಿಷ್ಟ ಅವಧಿಯಲ್ಲಿ ಮಾಹಿತಿ ನೀಡುವ ಜವಾಬ್ದಾರಿಯನ್ನು ಹೊರುತ್ತಾರೆ.
3. ಭ್ರಷ್ಟಾಚಾರ ನಿಯಂತ್ರಣ: ಸಾರ್ವಜನಿಕ ಹಣದ ದುರುಪಯೋಗ ಮತ್ತು ಅನಾವಶ್ಯಕ ರಹಸ್ಯತೆಯನ್ನು RTI ಕಡಿಮೆ ಮಾಡುತ್ತದೆ.
4. ಜನಸಹಭಾಗಿತ್ವ: ನಾಗರಿಕರು ಸರ್ಕಾರದ ಕಾರ್ಯಚಟುವಟಿಕೆಗಳ ಬಗ್ಗೆ ತಿಳಿದುಕೊಂಡು ಆಡಳಿತದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಸಾಧ್ಯವಾಗುತ್ತದೆ.
5. ನ್ಯಾಯಾಂಗ ಬೆಂಬಲ: Supreme Court of India ತನ್ನ ತೀರ್ಪುಗಳಲ್ಲಿ ಮಾಹಿತಿ ಹಕ್ಕು ಪ್ರಜಾಪ್ರಭುತ್ವದ ಅವಿಭಾಜ್ಯ ಅಂಗವೆಂದು ಗುರುತಿಸಿದೆ.

ಆದರೆ, ಮಾಹಿತಿ ಆಯೋಗಗಳಲ್ಲಿ ಖಾಲಿ ಹುದ್ದೆಗಳು, ವಿಳಂಬಗಳು ಮತ್ತು 2019ರ ತಿದ್ದುಪಡಿ ಪರಿಣಾಮಗಳು ಈ ಸಾಧ್ಯತೆಗಳನ್ನು ಸವಾಲೊಡ್ಡುತ್ತವೆ. ಹೀಗಾಗಿ, RTI ಯ ಸಂಪೂರ್ಣ ಪರಿಣಾಮಕಾರಿತ್ವವು ಕಾನೂನಿನ ಜಾರಿಗೆ ಇರುವ ಬದ್ಧತೆ ಮತ್ತು ಸಿವಿಲ್ ಸೊಸೈಟಿಯ ಸಕ್ರಿಯತೆಯ ಮೇಲೆ ಅವಲಂಬಿತವಾಗಿದೆ.

**2. ಸಿವಿಲ್ ಸೊಸೈಟಿಯ ಜಾಗೃತಿ ಮತ್ತು ಚಟುವಟಿಕೆಗಳ ಪಾತ್ರವನ್ನು ಪರಿಶೀಲಿಸುವುದು:**

ಈ ಅಧ್ಯಯನದ ಮತ್ತೊಂದು ಪ್ರಮುಖ ಉದ್ದೇಶವೆಂದರೆ ಸಿವಿಲ್ ಸೊಸೈಟಿಯ ಜಾಗೃತಿ ಕಾರ್ಯಕ್ರಮಗಳು, ಚಳುವಳಿಗಳು ಮತ್ತು ಪ್ರಜಾಸತ್ತಾತ್ಮಕ ಹಸ್ತಕ್ಷೇಪಗಳು ಮಾಹಿತಿ ಹಕ್ಕಿನ ಪರಿಣಾಮಕಾರಿತ್ವದ ಮೇಲೆ ಹೇಗೆ ಪ್ರಭಾವ ಬೀರುತ್ತವೆ ಎಂಬುದನ್ನು ಪರಿಶೀಲಿಸುವುದು. Right to Information Act ರೂಪುಗೊಳ್ಳುವಿಕೆಯಲ್ಲಿ ಸಿವಿಲ್ ಸೊಸೈಟಿಯ ಪಾತ್ರ ನಿರ್ಣಾಯಕವಾಗಿತ್ತು. ವಿಶೇಷವಾಗಿ Mazdoor Kisan Shakti Sangathan (MKSS) ನಡೆಸಿದ ಜನಸುನ್ವಾಯಿ (Jan Sunwai) ಚಳುವಳಿ ಗ್ರಾಮೀಣ ಮಟ್ಟದಲ್ಲಿ ಸರ್ಕಾರಿ ವೆಚ್ಚಗಳ ಪಾರದರ್ಶಕತೆಯನ್ನು ಸಾರ್ವಜನಿಕ ಚರ್ಚೆಗೆ ತಂದಿತು. ಇದರಿಂದ ಮಾಹಿತಿ ಹಕ್ಕು ಕಾನೂನು ರೂಪುಗೊಳ್ಳಲು ಸಾಮಾಜಿಕ ಒತ್ತಡ ಸೃಷ್ಟಿಯಾಯಿತು.

**ಸಿವಿಲ್ ಸೊಸೈಟಿಯ ಪಾತ್ರವನ್ನು ಕೆಳಗಿನ ಅಂಶಗಳ ಮೂಲಕ ವಿಶ್ಲೇಷಿಸಬಹುದು:**

1. ಜಾಗೃತಿ ಮೂಡಿಸುವಿಕೆ: NGOಗಳು, ವಿದ್ಯಾರ್ಥಿ ಸಂಘಟನೆಗಳು, ಮಾನವ ಹಕ್ಕು ಸಂಸ್ಥೆಗಳು RTI ಕುರಿತು ಶಿಬಿರಗಳು, ಕಾರ್ಯಾಗಾರಗಳು ನಡೆಸಿ ಜನರಲ್ಲಿ ಅರಿವು ಮೂಡಿಸುತ್ತಿವೆ.
2. ಸಾಮಾಜಿಕ ಲೆಕ್ಕಪತ್ರ (Social Audit): RTI ಚಳುವಳಿಯ ಆರಂಭದಲ್ಲಿ Mazdoor Kisan Shakti Sangathan ಪ್ರಮುಖ ಪಾತ್ರ ವಹಿಸಿತು. ಗ್ರಾಮೀಣ ಕಾರ್ಮಿಕರಿಗೆ ವೇತನ ವಿವರಗಳನ್ನು ಸಾರ್ವಜನಿಕವಾಗಿ ಓದಿಸುವ ಮೂಲಕ ಸಾಮಾಜಿಕ ಲೆಕ್ಕಪತ್ರ ಪ್ರಕ್ರಿಯೆ ಆರಂಭವಾಯಿತು.
3. ಕಾನೂನು ಪರಿಷ್ಕರಣೆಗಾಗಿ ಹೋರಾಟ: 2019ರ ತಿದ್ದುಪಡಿ ಕುರಿತಾಗಿ ಸಿವಿಲ್ ಸೊಸೈಟಿ ವ್ಯಕ್ತಪಡಿಸಿದ ಚಿಂತನೆಗಳು ಹಾಗೂ ಸ್ವತಂತ್ರ ಆಯೋಗಗಳ ಪರ ವಾದ.
4. ಭ್ರಷ್ಟಾಚಾರದ ಅನಾವರಣ: RTI ಅರ್ಜಿಗಳ ಮೂಲಕ ಅನೇಕ ಅಕ್ರಮಗಳು ಬಹಿರಂಗಗೊಂಡಿದ್ದು, ಆಡಳಿತಾತ್ಮಕ ಜವಾಬ್ದಾರಿತ್ವ ಹೆಚ್ಚಿಸಿದೆ.
5. 2019 Amendment ವಿರುದ್ಧ ಅನೇಕ ಪ್ರತಿಭಟನೆಗಳು: RTI ಯ 2019 ರ ತಿದ್ದುಪಡಿ ಬಗ್ಗೆ ಬಹುತೇಕ ಜಾಗತಿಕ ಸಂಸ್ಥೆಗಳು ಮತ್ತು ಅನೇಕ ನಾಗರಿಕ ಸಂಘಟನೆಗಳು ಗಂಭೀರ ಆಕ್ರೋಶ ವ್ಯಕ್ತಪಡಿಸಿವೆ. ಅವರು ಇದನ್ನು ಮಾಹಿತಿ ಆಯೋಗಗಳ ಸ್ವತಂತ್ರತೆಯನ್ನು ಕುಗ್ಗಿಸುವುದು ಎಂದು ಪ್ರತಿಪಾದಿಸಿದ್ದಾರೆ.
6. ನ್ಯಾಯಾಂಗ ಮತ್ತು ಸಾರ್ವಜನಿಕ ಹಿತ ಅರ್ಜಿಗಳು: RTI ಜಾರಿಗೆ ಸಂಬಂಧಿಸಿದ ಪ್ರಶ್ನೆಗಳನ್ನು Supreme Court of India ಮುಂದೆ ಒಯ್ಯುವ ಮೂಲಕ ಹಕ್ಕಿನ ಸಂರಕ್ಷಣೆ.

ಆದ್ದರಿಂದ, ಸಿವಿಲ್ ಸೊಸೈಟಿಯ ಜಾಗೃತಿ ಮತ್ತು ಚಟುವಟಿಕೆಗಳು ಮಾಹಿತಿ ಹಕ್ಕು ಕಾಯ್ದೆಯ ಜೀವಾಳವಾಗಿದ್ದು, ಉತ್ತಮ ಆಡಳಿತ ಸಾಧನೆಯಲ್ಲಿ ಅವುಗಳ ಪಾತ್ರ ಅನಿವಾರ್ಯವಾಗಿದೆ.

**3. ಆಡಳಿತದಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆಗೆ ಕಾಯ್ದೆಯ ಪರಿಣಾಮವನ್ನು ಅಧ್ಯಯನ ಮಾಡುವುದು:**

ಈ ಅಧ್ಯಯನದ ಮತ್ತೊಂದು ಪ್ರಮುಖ ಉದ್ದೇಶವೆಂದರೆ ಆಡಳಿತ ವ್ಯವಸ್ಥೆಯಲ್ಲಿ ಪಾರದರ್ಶಕತೆ (Transparency) ಮತ್ತು ಹೊಣೆಗಾರಿಕೆ (Accountability) ವೃದ್ಧಿಸಲು

ಮಾಹಿತಿ ಹಕ್ಕು ಕಾಯ್ದೆಯ ಪರಿಣಾಮವನ್ನು ವಿಶ್ಲೇಷಿಸುವುದು. Right to Information Act ಜಾರಿಗೆ ಬಂದ ನಂತರ ಸರ್ಕಾರದ ಕಾರ್ಯವಿಧಾನಗಳು, ಹಣಕಾಸು ನಿರ್ವಹಣೆ, ನೀತಿ ರೂಪಿಸುವಿಕೆ ಮತ್ತು ಯೋಜನೆಗಳ ಅನುಷ್ಠಾನ ಸಾರ್ವಜನಿಕ ಪರಿಶೀಲನೆಗೆ ಒಳಪಟ್ಟಿವೆ. ಇದು ಆಡಳಿತಾತ್ಮಕ ರಹಸ್ಯತೆಯನ್ನು ಕಡಿಮೆ ಮಾಡಿ, ನಿರ್ಧಾರ ಪ್ರಕ್ರಿಯೆಯನ್ನು ಹೆಚ್ಚು ಸ್ಪಷ್ಟಗೊಳಿಸಿದೆ.

**(1) ಪಾರದರ್ಶಕತೆಯ ಮೇಲೆ ಪರಿಣಾಮ:**

ಧಾರಾ 4(1)(b) ಅಡಿಯಲ್ಲಿ ಸಾರ್ವಜನಿಕ ಪ್ರಾಧಿಕಾರಗಳಿಗೆ ಸ್ವಯಂ ಬಹಿರಂಗಪಡಿಸುವಿಕೆ (Proactive Disclosure) ಕಡ್ಡಾಯವಾಗಿದೆ, ಸರ್ಕಾರದ ದಾಖಲೆಗಳು, ಟೆಂಡರ್ ವಿವರಗಳು, ನೇಮಕಾತಿ ಪ್ರಕ್ರಿಯೆಗಳು ಹಾಗೂ ಅನುದಾನಗಳ ವಿವರಗಳು ಸಾರ್ವಜನಿಕವಾಗಿ ಲಭ್ಯವಾಗುವ ಮೂಲಕ ಆಡಳಿತದ ಸ್ಪಷ್ಟತೆ ಹೆಚ್ಚಾಗಿದೆ ಮತ್ತು ಇದು ಭ್ರಷ್ಟಾಚಾರ ಮತ್ತು ಅಧಿಕಾರದ ದುರುಪಯೋಗವನ್ನು ಕಡಿಮೆ ಮಾಡಲು ಸಹಾಯಕವಾಗಿದೆ.

**(2) ಹೊಣೆಗಾರಿಕೆಯ ಮೇಲೆ ಪರಿಣಾಮ:**

ಸಾರ್ವಜನಿಕ ಮಾಹಿತಿ ಅಧಿಕಾರಿಗಳು (PIOs) ಸಮಯಕ್ಕೆ ಸರಿಯಾಗಿ ಮಾಹಿತಿ ನೀಡದಿದ್ದರೆ ದಂಡಾತ್ಮಕ ಕ್ರಮಗಳನ್ನು ಎದುರಿಸಬೇಕಾಗುತ್ತದೆ, ಮೇಲ್ಮನವಿ ವ್ಯವಸ್ಥೆ (First Appeal & Second Appeal) ಮೂಲಕ ನಾಗರಿಕರಿಗೆ ನ್ಯಾಯ ಸಿಗುವ ಅವಕಾಶ ಲಭ್ಯವಿದೆ ಮತ್ತು Supreme Court of India ತನ್ನ ಹಲವು ತೀರ್ಪುಗಳಲ್ಲಿ ಮಾಹಿತಿ ಹಕ್ಕು ಪ್ರಜಾಪ್ರಭುತ್ವದ ಅವಿಭಾಜ್ಯ ಅಂಗವೆಂದು ಘೋಷಿಸಿ ಆಡಳಿತದ ಜವಾಬ್ದಾರಿತ್ವವನ್ನು ಬಲಪಡಿಸಿದೆ.

**(3) ಕಾರ್ಯಾತ್ಮಕ ಸವಾಲುಗಳು:**

ಆದಾಗ್ಯೂ, ಮಾಹಿತಿ ಆಯೋಗಗಳಲ್ಲಿ ಬಾಕಿ ಪ್ರಕರಣಗಳು, ಅಧಿಕಾರಿಗಳ ವಿಳಂಬ ಮತ್ತು 2019ರ ತಿದ್ದುಪಡಿ ನಂತರ ಆಯೋಗಗಳ ಸ್ವತಂತ್ರತೆಯ ಕುರಿತು ಉದ್ಭವಿಸಿದ ಪ್ರಶ್ನೆಗಳು ಈ ಪರಿಣಾಮವನ್ನು ಭಾಗಶಃ ದುರ್ಬಲಗೊಳಿಸುತ್ತವೆ. ಹೀಗಾಗಿ, RTI ಕಾಯ್ದೆ ಆಡಳಿತದಲ್ಲಿ ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ಹೆಚ್ಚಿಸುವ ಶಕ್ತಿಶಾಲಿ ಸಾಧನವಾಗಿದ್ದರೂ, ಅದರ ಪರಿಣಾಮಕಾರಿತ್ವವು ಜಾರಿಗೆ ಸಂಬಂಧಿಸಿದ ಬದ್ಧತೆ ಮತ್ತು ಸಂಸ್ಥಾತ್ಮಕ ಸ್ವತಂತ್ರತೆಯ ಮೇಲೆ ಅವಲಂಬಿತವಾಗಿದೆ.

**4. ಜಾರಿಗೆ ಸಂಬಂಧಿಸಿದ ಸವಾಲುಗಳು, ಮಿತಿಗಳನ್ನು ಗುರುತಿಸುವುದು ಮತ್ತು ಸುಧಾರಣಾ ಸಲಹೆಗಳನ್ನು ನೀಡುವುದು:**

**(A) ಜಾರಿಗೆ ಸಂಬಂಧಿಸಿದ ಪ್ರಮುಖ ಸವಾಲುಗಳು**

1. ಮಾಹಿತಿ ಆಯೋಗಗಳಲ್ಲಿ ಖಾಲಿ ಹುದ್ದೆಗಳು ಮತ್ತು ಬಾಕಿ ಪ್ರಕರಣಗಳು: ಕೇಂದ್ರ ಮತ್ತು ರಾಜ್ಯ ಮಾಹಿತಿ ಆಯೋಗಗಳಲ್ಲಿ ಆಯುಕ್ತರ ಖಾಲಿ ಹುದ್ದೆಗಳು ಅಪೀಲುಗಳ ಮತ್ತು ದೂರುಗಳ ತ್ವರಿತ ವಿಲೇವಾರಿಗೆ ಅಡಚಣೆ ಉಂಟುಮಾಡುತ್ತವೆ. ಇದರಿಂದ ಪ್ರಕರಣಗಳ ಪೆಂಡೆನ್ಸಿ ಹೆಚ್ಚುತ್ತದೆ.
2. ವಿಳಂಬ ಮತ್ತು ನಿರ್ಲಕ್ಷ್ಯ : ಧಾರಾ (Section) 7(1) ಪ್ರಕಾರ 30 ದಿನಗಳೊಳಗೆ ಮಾಹಿತಿ ನೀಡಬೇಕಾದರೂ, ಕೆಲ ಅಧಿಕಾರಿಗಳು ಉದ್ದೇಶಪೂರ್ವಕವಾಗಿ ವಿಳಂಬ

ಮಾಡುತ್ತಾರೆ. ದಂಡಾತ್ಮಕ ಕ್ರಮಗಳ ಅನ್ವಯಿಕತೆ ಎಲ್ಲೆಡೆಯೂ ಪರಿಣಾಮಕಾರಿ ಆಗುವುದಿಲ್ಲ.

3. ಆಯೋಗಗಳ ಸ್ವತಂತ್ರತೆ ಕುರಿತ ಚರ್ಚೆ: 2019ರ ತಿದ್ದುಪಡಿಯ ಮೂಲಕ ಆಯುಕ್ತರ ವೇತನ, ಸೇವಾ ಷರತ್ತುಗಳನ್ನು ಕೇಂದ್ರ ಸರ್ಕಾರ ನಿರ್ಧರಿಸುವ ವ್ಯವಸ್ಥೆ ರೂಪುಗೊಂಡಿದ್ದು, ಆಯೋಗಗಳ ಸ್ವಾಯತ್ತತೆಗೆ ಧಕ್ಕೆಯಾಗಿದೆ ಎಂಬ ಅಭಿಪ್ರಾಯಗಳು ವ್ಯಕ್ತವಾಗಿವೆ.
4. RTI ಕಾರ್ಯಕರ್ತರ ಭದ್ರತೆ: RTI ಅರ್ಜಿಗಳ ಮೂಲಕ ಭ್ರಷ್ಟಾಚಾರ ಬಹಿರಂಗಪಡಿಸುವ ಕೆಲ ಕಾರ್ಯಕರ್ತರು ಬೆದರಿಕೆ ಹಾಗೂ ಹಿಂಸೆ ಎದುರಿಸುವ ಘಟನೆಗಳು ಕಂಡುಬಂದಿವೆ. ಇದು ಹಕ್ಕಿನ ಉಪಯೋಗಕ್ಕೆ ಆತಂಕ ಉಂಟುಮಾಡುತ್ತದೆ.
5. ಗೌಪ್ಯತೆ ವಿರುದ್ಧ ಸಾರ್ವಜನಿಕ ಹಿತ: ಡಿಜಿಟಲ್ ಡೇಟಾ ಸಂರಕ್ಷಣೆ ಮತ್ತು ವೈಯಕ್ತಿಕ ಮಾಹಿತಿಯ ರಕ್ಷಣೆ ಸಂಬಂಧಿತ ಕಾನೂನುಗಳ ಬೆಳವಣಿಗೆ RTI ಅಡಿಯಲ್ಲಿ ಮಾಹಿತಿ ನೀಡುವ ಪ್ರಕ್ರಿಯೆಗೆ ಹೊಸ ಸವಾಲುಗಳನ್ನು ಸೃಷ್ಟಿಸಿದೆ.

**(B) ಮಿತಿಗಳು:**

ಸಾರ್ವಜನಿಕ ಪ್ರಾಧಿಕಾರಗಳ ದಾಖಲಾತಿ ನಿರ್ವಹಣೆಯಲ್ಲಿ ದೌರ್ಬಲ್ಯ, ಗ್ರಾಮೀಣ ಮತ್ತು ಹಿಂದುಳಿದ ವರ್ಗಗಳಲ್ಲಿ ಅರಿವಿನ ಕೊರತೆ, Proactive Disclosure (ಧಾರಾ 4) ಸಮರ್ಪಕವಾಗಿ ಜಾರಿಗೆ ಬರದಿರುವುದು ಮತ್ತು ಕಾನೂನು ದುರುಪಯೋಗದ ಆರೋಪಗಳು (Vexatious Applications).

**(C) ಸುಧಾರಣಾ ಸಲಹೆಗಳು:**

1. ಮಾಹಿತಿ ಆಯೋಗಗಳ ಬಲಪಡಿಸುವಿಕೆ: ಖಾಲಿ ಹುದ್ದೆಗಳನ್ನು ತಕ್ಷಣ ಭರ್ತಿ ಮಾಡುವುದು ಮತ್ತು ಆಯೋಗಗಳ ಸ್ವತಂತ್ರತೆಯನ್ನು ಖಾತ್ರಿ ಪಡಿಸುವುದು.
2. ಡಿಜಿಟಲ್ ಪಾರದರ್ಶಕತೆ: ಎಲ್ಲಾ ಸಾರ್ವಜನಿಕ ಪ್ರಾಧಿಕಾರಗಳು ಧಾರಾ 4 ಅಡಿಯಲ್ಲಿ ಅಗತ್ಯ ಮಾಹಿತಿಯನ್ನು ನಿಯಮಿತವಾಗಿ ವೆಬ್‌ಸೈಟ್‌ಗಳಲ್ಲಿ ಪ್ರಕಟಿಸುವುದು.
3. RTI ಕಾರ್ಯಕರ್ತರಿಗೆ ರಕ್ಷಣಾ ವ್ಯವಸ್ಥೆ: Whistleblower Protection ವ್ಯವಸ್ಥೆಯನ್ನು ಬಲಪಡಿಸುವುದು.
4. ಅಧಿಕಾರಿಗಳಿಗೆ ತರಬೇತಿ: PIO ಗಳಿಗೆ ನಿಯಮಿತ ತರಬೇತಿ ನೀಡುವುದರಿಂದ ತಪ್ಪು ನಿರಾಕರಣೆಗಳು ಮತ್ತು ವಿಳಂಬವನ್ನು ಕಡಿಮೆ ಮಾಡಬಹುದು.
5. ಜನಜಾಗೃತಿ ಅಭಿಯಾನ: ಗ್ರಾಮೀಣ ಮತ್ತು ಹಿಂದುಳಿದ ವರ್ಗಗಳಲ್ಲಿ RTI ಬಗ್ಗೆ ವಿಶೇಷ ಅರಿವು ಕಾರ್ಯಕ್ರಮಗಳನ್ನು ನಡೆಸುವುದು.
6. ಮಾಹಿತಿ ಹಕ್ಕು ಕಾಯ್ದೆ 2005 ಮತ್ತು 2019 Amendment–ಗಳ ನಡುವಿನ ಕಲಹ ಮತ್ತು ಪರಿಷ್ಕರಣೆಗಳು ಭಾರತದ ಸಂವಿಧಾನಾತ್ಮಕ ಮೌಲ್ಯಗಳಿಗೆ ಪ್ರಶ್ನೆಗಳನ್ನು ಉಂಟುಮಾಡುತ್ತವೆ. ಹೆಚ್ಚಿನ ಸ್ವತಂತ್ರ ಆಯೋಗಗಳು, vacancies ತುಂಬುವುದು, transparency–ಗೆ ಒಳಗೊಂಡ privacy vs public interest ಸಮತೋಲನೆ ಬೇಕಾಗಿದೆ.

**5. ಉಪಸಂಹಾರ:**

ಮಾಹಿತಿ ಹಕ್ಕು ಕಾಯ್ದೆ ಉತ್ತಮ ಆಡಳಿತದ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಯಾಗಿದೆ.

ಇದರ ಯಶಸ್ಸು ಸಿವಿಲ್ ಸೊಸೈಟಿಯ ಸಕ್ರಿಯತೆ, ಸಾರ್ವಜನಿಕ ಜಾಗೃತಿ ಮತ್ತು ಆಡಳಿತದ ಸಹಕಾರದ ಮೇಲೆ ಅವಲಂಬಿತವಾಗಿದೆ. ಪಾರದರ್ಶಕತೆ ಮತ್ತು ಹೊಣೆಗಾರಿಕೆಯನ್ನು ಬಲಪಡಿಸಲು ಮಾಹಿತಿ ಆಯೋಗಗಳ ಸಾಮರ್ಥ್ಯವರ್ಧನೆ, ಡಿಜಿಟಲ್ ಪಾರದರ್ಶಕತೆ ಹಾಗೂ ಸಾರ್ವಜನಿಕ ಜಾಗೃತಿ ಕಾರ್ಯಕ್ರಮಗಳು ಅಗತ್ಯ. ಒಟ್ಟಾರೆ, ಸಿವಿಲ್ ಸೊಸೈಟಿ ಮತ್ತು ಮಾಹಿತಿ ಹಕ್ಕು ಕಾಯ್ದೆಯ ಸಮನ್ವಯವು ಪ್ರಜಾಪ್ರಭುತ್ವವನ್ನು ಬಲಪಡಿಸುವ ಪ್ರಮುಖ ಸಾಧನವಾಗಿದೆ.

## ಪರಾಮರ್ಶನ ಗ್ರಂಥಗಳು:


1. State of UP v. Raj Narain (1975)
2. S.P. Gupta v. Union of India (1982)
3. ಮಾಹಿತಿ ಹಕ್ಕು ಅಧಿನಿಯಮ, 2005 [15ನೇ ಜೂನ್, 2005] (13.02.09ರ ಭಾರತ ವಿಶೇಷ ರಾಜ್ಯ ಪತ್ರದ IXನೇ ಭಾಗದ Iನೇ ವಿಭಾಗದ 39ನೇ ಸಂಪುಟದ 1ನೇ ಸಂಚಿಕೆಯಲ್ಲಿ 115 ರಿಂದ 140 ರ ವರೆಗಿನ ಪುಟಗಳಲ್ಲಿ ಪ್ರಕಟವಾಗಿದೆ)
4. ಸಾ.ರ. ಸುಳಕೂಡೆ, ಮಾಹಿತಿ ಹಕ್ಕು ಕಾಯ್ದೆಯ ಪರಿಚಯ 2005, ವಿದ್ಯಾ ಮಂದಿರ ಬುಕ್ ಡಿಪೋ ಹುಬ್ಬಳ್ಳಿ.
5. ಡಾ. ಶೇಖರ್ ಡಿ. ಸಜ್ಜನರ, ಮಾನ್ಯ ಮಾಹಿತಿ ಆಯುಕ್ತರು, ಕರ್ನಾಟಕ ಮಾಹಿತಿ ಆಯೋಗ ಬೆಂಗಳೂರು.
6. ಜೆ.ಎಂ. ರಾಜಶೇಖರ್. ಗ್ರಂಥ : ''ಮಾಹಿತಿ ಬಂತು ಮಾಹಿತಿ'' ಶ್ರೀ ಸಾಮಾನ್ಯರಿಗೆ ಮಾಹಿತಿ ಹಕ್ಕು ಕಾಯ್ದೆ ಪರಿಚಯ, ವಾಸನ್ ಪಬ್ಲಿಕೇಶನ್ಸ್ ಬೆಂಗಳೂರು.
7. ಜೆ.ಎಂ. ರಾಜಶೇಖರ 'ಮಾಹಿತಿ ಹಕ್ಕು ದರ್ಬಾರ್' ರಮ್ಯಾರಾಣಿ ಸೂರಜ್ ಪ್ರಕಾಶನ, #36/ ಅಮ್ಮ. ಮೌಂಟ್ ವೀವ್ ಸ್ಕೂಲ್ ಕ್ರಾಸ್, ಹುಣಸಿಕಟ್ಟೆ ರಸ್ತೆ, ರಾಣೆಬೆನ್ನೂರು, ಜಿಲ್ಲಾ ಹಾವೇರಿ, ಕರ್ನಾಟಕ. ಶ್ರೀ ಭವಾನಿ ಅಫ್ ಸೆಟ್ ಪ್ರಿಂಟರ್ಸ್ ಹುಬ್ಬಳ್ಳಿ.
8. Supreme Court of India Judgments
9. World Bank Report on Governance
10. Mazdoor Kisan Shakti Sangathan Movement Reports
11. Centre notifies RTI amendments 2019 – Business Standard.
12. RTI reform challenges – India Legal.
13. Evolution of RTI & civil society role – PubAdmin Institute.



**Funding:**

This study was not funded by any grant.


**Conflict of interest:**

The Authors have no conflict of interest to declare that they are relevant to the content of this article.


**About the License:**

© The Authors 2024. The text of this article is open access and licensed under a Creative Commons Attribution 4.0 International License.